ಶ್ರೀ ಆರ್. ವೆಂಕಟರಾಮಯ್ಯ.—ಮಾನ್ಯ ಮಂತ್ರಿಗಳು ಹಂತಹಂತವಾಗಿ ಮಾಡುತ್ತೇವೆ ಎಂದು ಹೇಳಿದರು. ಹೋಗಲಿ ನೀವು ಈ ವರ್ಷವಾದರೂ ಹೋಬಳಿ ಹೆಡ್ ಕ್ವಾರ್ಟರ್ಸ್‌ಗಳಲ್ಲಿ ನಿವೃತ್ತ ನಾರ್ಮಸ್‌ಗಾದರೂ ಒಪ್ಪುತ್ತೀರಾ? ಹೋಬಳಿ ಹೆಡ್ ಕ್ವಾರ್ಟರ್ಸ್‌ನಲ್ಲಿ ಎಲ್ಲಾ ಕಡೆ ಹೈಸ್ಕೂಲ್ ಇದೆ ಎಂದು ತಪ್ಪಾಗಿ ಗೊತ್ತಿದೆ. ಹೋಬಳಿ ಹೆಡ್ ಕ್ವಾರ್ಟರ್ಸ್ ಅಂದರೆ ೪-೫ ಸಾವಿರ ಜನ ಇರುತ್ತಾರೆ ಎಂದು ತಪ್ಪಾಗಿ ಗೊತ್ತು. ಇನ್ನೇನೂ ಇಲ್ಲದೇ ಇದ್ದರೂ ಕೂಡ ಹೋಬಳಿ ಹೆಡ್ ಕ್ವಾರ್ಟರ್ಸ್‌ಗಾದರೂ ಹಾಸ್ಪೆಲ್ ಕೊಡುವುದಕ್ಕೆ ಈ ವರ್ಷ ಪ್ರಯತ್ನ ಮಾಡುತ್ತೀರಾ?

ಶ್ರೀ ಜಿ. ಬಸವಣ್ಣಪ್ಪ.—ಮೊದಲು ಪ್ರಾರಂಭ ಮಾಡತಕ್ಕಂಥದ್ದು ಕಾಲೇಜು, ಹೈಸ್ಕೂಲ್ಸ್ ಎಲ್ಲದೆ, ಅವಶ್ಯಕತೆ ಎಲ್ಲಿದೆ ಎಲ್ಲಿ ಹಿಂದುಳಿದ ಪಂಗಡ, ಪರಿಶಿಷ್ಟ ಜಾತಿಯವರು, ಇದ್ದಾರೆ ಅಲ್ಲಿ ಮೊದಲು ಆದ್ಯತೆ ಕೊಡುತ್ತೇವೆ. ಎರಡನೆಯ ಆದ್ಯತೆ ಹೋಬಳಿಗೆ.

ಅಧ್ಯಕ್ಷರು.—ಈಗ ಕಂದಾಯ ಮಾನ್ಯ ಮಂತ್ರಿಗಳು ಬಂದಿದ್ದಾರೆ. ಅವರ ಪ್ರಶ್ನೆ ತೆಗೆದು ಕೊಳ್ಳೋಣ.

ಬನಹಟ್ಟಿಯಲ್ಲಿ ಉಪ-ನೋಂದಣಿ ಕಛೇರಿ

೬೫. ಶ್ರೀ ಬಾಬುರೆಡ್ಡಿ ತಂಗಳ್ (ಬೀಳಗಿ).—ಮಾನ್ಯ ಕಂದಾಯ ಹಾಗೂ ಯೋಜನಾ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ಜಮಖಂಡಿ ತಾಲ್ಲೂಕಿನ ಬನಹಟ್ಟಿಯಲ್ಲಿ ಉಪ-ನೋಂದಣಿ ಅಧಿಕಾರಿಗಳ ಕಛೇರಿಯನ್ನು ಆರಂಭಿಸುವ ಸಲಹೆ ಏನಾದರೂ ಸರ್ಕಾರದಲ್ಲಿದೆಯೇ :

ಆ) ಹಾಗಿದ್ದಲ್ಲಿ ಈ ಕಛೇರಿಯನ್ನು ಶೀಘ್ರವೇ ಆರಂಭಿಸಲು ಸರ್ಕಾರದವರು ಕೈಗೊಂಡ ಕ್ರಮಗಳೇನು?

ಶ್ರೀ ಎಸ್. ಆರ್. ಬೊಮ್ಮಾಯಿ (ಕಂದಾಯ ಹಾಗೂ ಯೋಜನಾ ಮಂತ್ರಿಗಳು).—

ಅ) ಹೌದು.

ಆ) ಈ ಪ್ರಸ್ತಾವನೆಯನ್ನು ಪರಿಶೀಲಿಸಲಾಗುತ್ತಿದೆ.

ಶ್ರೀ ಬಾಬುರೆಡ್ಡಿ ವಿ. ತಂಗಳ್.—ಸನ್ಮಾನ್ಯ ಅಧ್ಯಕ್ಷರೆ, ಸನ್ಮಾನ್ಯ ಕಂದಾಯ ಮಂತ್ರಿಗಳಿಗೆ ನನಗಿಂತ ಚೆನ್ನಾಗಿ ತಿಳಿದಿರುವಂತೆ ರಬಕವಿ, ಬನಹಟ್ಟಿ ನಗರಸಭೆ ಇರುವಂಥ ಅವಳಿ ನಗರಗಳು. ಅಲ್ಲಿಂದ ೧೦ ಮೈಲಿ ದೂರದಲ್ಲಿರುವ ತೇರದಾಳು ಮುನಿಸಿಪಾಲಿಟಿ ಇರುವಂಥ ನಗರ. ಸುತ್ತಮುತ್ತಲಿನ ೨೫ ಹಳ್ಳಿಗಳಿಗೆ ಬನಹಟ್ಟಿ ಕೇಂದ್ರಸ್ಥಾನವಾಗಿದೆ. ಬನಹಟ್ಟಿಯಲ್ಲಿ ಈಗಾಗಲೇ ಉಪ-ಖಜಾನೆ, ನ್ಯಾಯಾಲಯಗಳು, ನಾಲ್ಕಾರು ಬ್ಯಾಂಕುಗಳು, ನಾಲ್ಕಾರು ಕಾಲೇಜುಗಳು, ಕೆ ಎಸ್.ಟಿ.ಡಿ.ಸಿ., ಕೆ.ಇ.ಬಿ. ಉಪ-ವಿಭಾಗಗಳು ಎಲ್ಲಾ ಇವೆ ಆದಕಾರಣ ಜಮಖಂಡಿಯಲ್ಲಿಯ ಉಪ-ನೋಂದಣಿ ಕಛೇರಿಯ ಒತ್ತಡವನ್ನು ತಗ್ಗಿಸಲಿಕ್ಕೆ ಬನಹಟ್ಟಿಯಲ್ಲಿ ಒಂದು ಉಪ-ನೋಂದಣಿ ಕಛೇರಿಯ ಅವಶ್ಯಕತೆ ಇದೆ. ಅದನ್ನು ಶೀಘ್ರವಾಗಿ ಮಾಡಿಸಿಕೊಡಬೇಕು. ಆ ನಿಟ್ಟಿನಲ್ಲಿ ಮಾನ್ಯ ಕಂದಾಯ ಮಂತ್ರಿಗಳು ತೀವ್ರ ಕ್ರಮ ತೆಗೆದುಕೊಳ್ಳಬೇಕು ಎಂದು ನಾನು ತಮ್ಮ ಮುಖೇನ ಅವರಲ್ಲಿ ವಿನಂತಿ ಮಾಡಿಕೊಳ್ಳುತ್ತೇನೆ.

ಶ್ರೀ ಎಸ್. ಆರ್. ಬೊಮ್ಮಾಯಿ.—ಅದು ಅವಶ್ಯಕತೆ ಇದೆ ಎಂದು ಒಪ್ಪಿದ್ದೇನೆ. ಆದಷ್ಟು ಬೇಗ ಅಲ್ಲಿ ಪ್ರಾರಂಭ ಮಾಡುತ್ತೇನೆ.

ಪ್ರಶ್ನೆ ಸಂಖ್ಯೆ ೪೧೨, ೪೬೨, ೪೭೭, ೪೭೮ } ಮಾನ್ಯ ಸದಸ್ಯರು ಗೈರುಹಾಜರಾಗಿದ್ದಾರೆ.

ಅಧ್ಯಕ್ಷರು.—ಮಲ್ಲಾರಿಗೌಡರ ಪರವಾಗಿ, ಮಾನ್ಯ ಕೃಷ್ಣನ್‌ರವರೇ ಪ್ರಶ್ನೆಯನ್ನು ಕೇಳಿ.